ಹಾಡದಿದ್ದರೂ ಅದು ರೈಲಿನ ಆ ಡಬ್ಬಿಯ ತುಂಬ ಝೇಂಕರಿಸತೊಡಗಿತು. ಈಗೊಂದು ಪೆಟ್ಟಿಗೆ ಸಿದ್ಧವಾಗದಿದ್ದರೆ ದೈವಕೃಪೆಯಂತೆ ಅವತರಿಸಿರುವ ಈ ರಾಗವೇ ಪರಾರಿಯಾಗಿಬಿಡಬಹುದೆಂದು ಭಯವಾಯಿತು. ತಕ್ಷಣ ಮೇಲೆದ್ದು ಆ ಕತ್ತಲಿನಲ್ಲಿ ತಡವರಿಸುತ್ತ ಹೋಗಿ ಡಬ್ಬಿಯ ಉದ್ದಕ್ಕೂ ಇದ್ದ ಒಂದೊಂದು ಕಿಟಕಿಯನ್ನೂ ಮುಚ್ಚಿ, ತೆರೆಯೆಳೆದರು. ಈಗ ಮುಚ್ಚಿದ ಪೆಟ್ಟಿಗೆಯ ಹಾಗೆ ಒಳಗೆಲ್ಲ ಕತ್ತಲೋ ಕತ್ತಲು. ಆಹಾ! ರಾಗವೊಂದಕ್ಕೆ ಆಕಾರ ಕೊಡುತ್ತಿರುವ ಈ ಸ್ವರಸಾಮ್ರಾಜ್ಯಕ್ಕೆ ರೈಲುಡಬ್ಬಿಯೇ ಒಂದು ಪೆಟ್ಟಿಗೆಯಾಯಿತಲ್ಲ ಎಂದು ಹಿಗ್ಗಿದರು. ಅಷ್ಟೆ, ಮುಂದಿನ ಕೆಲವೇ ಕ್ಷಣಗಳಲ್ಲಿ ಹೃದಯವಿದ್ರಾವಕವಾದ ಆ ರಾಗಕ್ಕೆ ತಲೆದೂಗುತ್ತಲೇ ಕುಸಿದುಬಿದ್ದರು''. ಬಸವನಾಳಮಠರಿಗೇನೋ ರಾಗದ ಪರವಶತೆಯಲ್ಲಿ ಇಡೀ ರೈಲುಡಬ್ಬಿಯೇ ಒಂದು ಪೆಟ್ಟಿಗೆಯಾಗಿ ಪರಿಣಮಿಸಿ ಉಸಿರುಗಟ್ಟಿತು. ಆದರೆ, ಈ ಉಸಿರುಗಟ್ಟುವಿಕೆಯನ್ನು ನಾವೆಲ್ಲರೂ ಒಂದಲ್ಲಾ ಒಂದು ಬಗೆಯಲ್ಲಿ ಅನುಭವಿಸುತ್ತಿಲ್ಲವೇ? ನಾವು ಕೂಡ ಅನೇಕ ಪೆಟ್ಟಿಗೆಗಳನ್ನು ರೂಪಿಸಿಕೊಂಡು ಬಂದಿಗಳಾಗಿ ನರಳುತ್ತಿಲ್ಲವೇ? ನಮ್ಮನ್ನು ಸೆಳೆಯುತ್ತಿರುವುದಾದರೂ ಯಾವ ರಾಗ?

ಗುಲಾಬಿ ಕೂತಿರುವ ಟ್ರಂಕು ಇದೆಯಲ್ಲ; ಅದು ವರ್ತಮಾನದ ಎಲ್ಲ ಸಮಸ್ಯೆಗಳನ್ನೂ ತನ್ನೊಡಲೊಳಗೆ ಬಚ್ಚಿಟ್ಟುಕೊಂಡಿದೆ ಎನ್ನಿಸುತ್ತದೆ. ಭೂಮಿಯನ್ನು ಬಗೆಯುವುದು, ಕಾಡುಗಳನ್ನು ಸವರುವುದು, ನೀರು–ಬಾನಲ್ಲಿ ವಿಷ ತುಂಬುವುದು, ಅದೇ ವಿಷವನ್ನು ನಮ್ಮೊಳಗೂ ತುಂಬಿಕೊಳ್ಳುವುದು, ಜಾತಿಧರ್ಮದ ಹೆಸರಿನಲ್ಲಿ ಗೋಡೆಗಳನ್ನು ಸೃಷ್ಟಿಸುವುದು – ಇಂಥ ನೂರೆಂಟು ತಲ್ಲಣಗಳನ್ನು ಟ್ರಂಕೊಂದಕ್ಕೆ ತುರುಕಿ ಅಮುಕಿ, ಅದಕ್ಕೆ ಬೀಗ ಹಾಕಿ, ಆ ಬೀಗವನ್ನೆಲ್ಲೋ ಉದ್ದೇಶಪೂರ್ವಕವಾಗಿ ಕಳೆದುಕೊಂಡು, ಜೀವನ ಮತ್ತು ಜಗತ್ತು ಸುಂದರವಾಗಿದೆ ಎಂದು ಭ್ರಮಿಸಿಕೊಳ್ಳಬೇಕಾದ ಸಂದರ್ಭವಿದು. ಅಗ್ನಿಪರ್ವತ ಸಿಡಿದಂತೆ ಟ್ರಂಕು ಯಾವಾಗ ಸ್ಫೋಟಗೊಳ್ಳುವುದೋ ನಮ್ಮ ಭ್ರಮೆಯ–ಮಾತಿನ ಬಲೂನಿಗೆ ನಿಜದ ಸೂಜಿಮೊನೆ ಯಾವಾಗ ತಾಗುವುದೋ... ಈ ರಹಸ್ಯವೂ ಯಾವುದೋ ಟ್ರಂಕಿನಲ್ಲಿ ಹುದುಗಿದಂತಿದೆ.

ಈಗಲೂ ಅಟ್ಟದ ಮೇಲೋ ಕತ್ತಲ ಕೋಣೆಯಲ್ಲೋ ಪಿಸುಗುಡುತ್ತಿರುವ ಟ್ರಂಕನ್ನು ತೆಗೆದುನೋಡಿದರೆ ನಮ್ಮ ಹಿರೀಕರ ಬದುಕಿನ ಮಾದರಿಗಳು, ನಾವು ಬಾಳಬೇಕಾದ ದಾರಿಗಳು ಸಿಕ್ಕಾವು.

⌘

